# ಸ್ವಾಮಿ ವಿವೇಕಾನಂದರ ಮಂದಿರ, ಬೇಲೂರು ಮಠ

## (ಮುಖಪುಟದ ವಿವರಣೆ)



ಬೇಲೂರು ಮಠದಲ್ಲಿರುವ ಸ್ವಾಮಿ ವಿವೇಕಾನಂದರ ಮಂದಿರವು ಎರಡು ಅಂತಸ್ತಿನ ಭವ್ಯ ಕಟ್ಟಡವಾಗಿದೆ. ಮೇಲಿನ ಅಂತಸ್ತಿನಲ್ಲಿ ಅಮೃತಶಿಲೆಯಲ್ಲಿ ನಿರ್ಮಿಸಲಾದ, ಬಂಗಾಳಿ ವರ್ಣದಲ್ಲಿರುವ ಓಂಕಾರದ ಪ್ರತಿಮೆಯಿದೆ. ನೆಲ ಅಂತಸ್ತಿನಲ್ಲಿ ಅಮೃತಶಿಲೆಯ ಸ್ವಾಮಿ ವಿವೇಕಾನಂದರ ಉಬ್ಬುಗೆತ್ತನೆಯಿದೆ. ಕೆಳ ಅಂತಸ್ತಿನಲ್ಲಿ (ನೆಲಕ್ಕಿಂತ ತಗ್ಗಿನಲ್ಲಿದೆ) ಸ್ವಾಮೀಜಿಯವರ ದೇವಾಲಯವಿದೆ. ಈ ಮಂದಿರವನ್ನು ನಿರ್ಮಿಸುವಾಗ ಅಲ್ಲಿನ ನೆಲವು ತಗ್ಗಿನಲ್ಲಿದ್ದುದೇ ಇದಕ್ಕೆ ಕಾರಣ.

ಸ್ವಾಮಿ ವಿವೇಕಾನಂದರ ಮಹಾಸಮಾಧಿಯಾದ ನಂತರ ಅವರ ಕಳೇಬರವನ್ನು ಚಿತೆಗೇರಿಸಿದ ಸ್ಥಳದಲ್ಲಿಯೇ ಈ ಮಂದಿರದ ನಿರ್ಮಾಣವಾಗಿದೆ. ಸ್ವತಃ ಸ್ವಾಮೀಜಿಯವರೇ ಅದಕ್ಕೆ ಸ್ಥಳವನ್ನು ಆರಿಸಿದ್ದರು. ಅವರ ಜೀವನಚರಿತ್ರೆಯಲ್ಲಿ ಇದನ್ನು ಹೀಗೆ ದಾಖಲಿಸಲಾಗಿದೆ: 'ಸ್ವಾಮೀಜಿ ದೇಹತ್ಯಾಗ ಮಾಡುವುದಕ್ಕೆ ಮೂರು ದಿನಗಳ ಮುನ್ನ, ಮಧ್ಯಾಹ್ನದ ವೇಳೆಗೆ ಬೇಲೂರು ಮಠದ ವಿಶಾಲ ಹುಲ್ಲುಹಾಸಿನಲ್ಲಿ ಸ್ವಾಮಿ ಪ್ರೇಮಾನಂದರೊಂದಿಗೆ ನಡೆದಾಡುತ್ತಿದ್ದರು. ಗಂಗಾನದಿಯ ತೀರದಲ್ಲಿದ್ದ ಒಂದು ಸ್ಥಳವನ್ನು ತಮ್ಮ ಸೋದರ ಸಂನ್ಯಾಸಿ ಪ್ರೇಮಾನಂದರಿಗೆ ಅವರು ತೋರಿಸುತ್ತ ಗಂಭೀರಧ್ವನಿಯಿಂದ ಹೀಗೆಂದರು: ''ನಾನು ದೇಹತ್ಯಾಗ ಮಾಡಿದಾಗ ನನ್ನ ಅಂತ್ಯಕ್ರಿಯೆಯನ್ನು ಅಲ್ಲಿ ಮಾಡು!'' ಸ್ವಾಮೀಜಿ ೧೯೦೨ರ ಜುಲೈ ೪ರಂದು ಮಹಾಸಮಾಧಿ ಹೊಂದಿದರು. ಅವರ ಗೌರವಾರ್ಥವಾಗಿ ಇಂದು ಆ ಸ್ಥಳದಲ್ಲೇ ಮಂದಿರವಿದೆ.'

ಆದರೆ ಈ ಮಂದಿರದ ಕಟ್ಟಡ ಪೂರ್ಣಗೊಳ್ಳಲು ಬಹು ದೀರ್ಘಕಾಲ ಬೇಕಾಯಿತು. ಸುಮಾರು ೨೧ ವರ್ಷಗಳ ನಂತರ, ಅಂದರೆ ೧೯೨೪ರಲ್ಲಿ ಇದರ ಎಲ್ಲ ಕೆಲಸಗಳು ಪೂರ್ಣಗೊಂಡವು. ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಈ ಕಾರ್ಯಕ್ಕೆ ಅಗತ್ಯವಾದ ಧನಸಂಗ್ರಹಕ್ಕಾಗಿ ಸಾಕಷ್ಟು ಮನವಿಗಳನ್ನು ಕಳುಹಿಸಿದ್ದರೂ, ಕಟ್ಟಡ ನಿರ್ಮಾಣಕಾರ್ಯ ಆರಂಭವಾದುದು ೧೯೦೭ರ ಜನವರಿಯಲ್ಲಿ.

ಮಂದಿರದ ನಿರ್ಮಾಣಕಾರ್ಯ ನಿಧಾನಗತಿಯಲ್ಲಿ ಸಾಗುತ್ತಿದ್ದುದನ್ನು ಗಮನಿಸಿ ಸ್ವಾಮಿ ಬ್ರಹ್ಮಾನಂದರು ತಮ್ಮ ಅಸಮಾಧಾನವನ್ನು ಹೀಗೆ ವ್ಯಕ್ತಪಡಿಸಿದರು: ''ಸ್ವಾಮೀಜಿ ಹತ್ತು ವರ್ಷಗಳ ಹಿಂದೆಯೇ ದೇಹತ್ಯಾಗ ಮಾಡಿದರು. ಇಡೀ ದೇಶವೇ ಇದರಿಂದ ತುಂಬಲಾರದ ನಷ್ಟವನ್ನು ಅನುಭವಿಸಿದೆ. ಜನರು ಈ ಕುರಿತು ಅಪಾರ ದುಃಖ, ವಿಷಾದಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಆಧುನಿಕ ಭಾರತದ ಈ ದೇಶಭಕ್ತ ಸಂತನಿಗೆ ಯೋಗ್ಯವಾದ ಒಂದು ಸ್ಮಾರಕ ಮಂದಿರವನ್ನು ಇನ್ನೂ ನಿರ್ಮಿಸಲಾಗಲಿಲ್ಲವೆ? ಭಾರತೀಯರ ನಿರುಪಯುಕ್ತತೆಗೆ ಇದೊಂದು ಉದಾಹರಣೆ! ಎಂತಹ ನಾಚಿಕೆಗೇಡು!'' ಅವರ ಈ ಬೈಗುಳ ಕೂಡ ಹೆಚ್ಚು ಫಲಕಾರಿಯಾಗಲಿಲ್ಲ.

ಸೋದರಿ ನಿವೇದಿತಾ, ಶ್ರೀಮತಿ ಲೆಗೆಟ್ ಹಾಗೂ ಜೋಸೆಫಿನ್ ಮ್ಯಾಕ್ಲಿಯಾಡ್ ಅವರ ಸಹಕಾರದಿಂದ ಹಲವು ಹಂತಗಳಲ್ಲಿ ಈ ಮಂದಿರದ ನಿರ್ಮಾಣ ಕಾರ್ಯವು ಪೂರ್ಣಗೊಂಡಿತು.

ಜೈಪುರದಲ್ಲಿ ಸ್ವಾಮೀಜಿಯವರ ಅಮೃತಶಿಲೆಯ ಉಬ್ಬುಗೆತ್ತನೆಯನ್ನು ಕೆತ್ತಲಾಯಿತು. ೧೯೧೩ರಲ್ಲಿ ಸರಳವಾದ ರೀತಿಯಲ್ಲಿ ಅದರ ಪ್ರತಿಷ್ಠಾಪನೆ ನಡೆಯಿತು ; ಅಲ್ಲಿ ಸ್ವಾಮೀಜಿಯವರ ಪೂಜೆ ಕೂಡ ಆರಂಭವಾಯಿತು. ನಿರ್ಮಾಣಕಾರ್ಯ ಇನ್ನೂ ಮುಂದುವರಿಯುತ್ತಲೇ ಇತ್ತು ; ೧೯೨೩ರಲ್ಲಿ ಅದು ಪೂರ್ಣಗೊಂಡಿತು. ೧೯೨೪ರಲ್ಲಿ ಮಂದಿರ ಹಾಗೂ ಓಂ ಮಂದಿರ ಇವೆರಡೂ ಉದ್ಘಾಟನೆಗೊಂಡವು.

ಸ್ವಾಮಿ ವಿಜ್ಞಾನಾನಂದರು ಸ್ವಾಮೀಜಿ ಮಂದಿರದ ನಿರ್ಮಾಣ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಿದ್ದರು. ಆಗ ಅಲಹಾಬಾದಿನಲ್ಲಿ ವಾಸಿಸುತ್ತಿದ್ದ ಅವರು, ಮಂದಿರ ನಿರ್ಮಾಣ ಆರಂಭವಾಗುವ ಮೊದಲು ದೀರ್ಘಕಾಲ ಸ್ವಾಮೀಜಿಯವರ ಮೇಲೆ ಧ್ಯಾನಿಸುತ್ತಿದ್ದರು. ಸ್ವಾಮೀಜಿ ಸಪ್ತರ್ಷಿ ಮಂಡಲದಿಂದ ಬಂದವರೆಂಬ ಶ್ರೀರಾಮಕೃಷ್ಣರ ಮಾತನ್ನು ಅವರು ಅನೇಕ ಬಾರಿ ನೆನಪಿಸಿಕೊಳ್ಳುತ್ತಿದ್ದರು. ¤